**ಓ.ಎಸ್.ನಂಃ 20/2024**

**ಪಿಡಬ್ಲ್ಯೂ-2**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 26.11.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

1ನೇ ವಾದಿ ನನ್ನ ಅಕ್ಕ. ಈ ದಾವೆಗೆ ನಾನು ಪಕ್ಷಗಾರನಲ್ಲ. 40 ವರ್ಷಗಳ ಹಿಂದೆ 1ನೇ ವಾದಿಗೆ ಮದುವೆಯಾಗಿದೆ. 25 ವರ್ಷಗಳ ಹಿಂದೆ 2ನೇ ವಾದಿಗೆ ಮದುವೆಯಾಗಿದೆ. ಚಿಕ್ಕಣ್ಣಮ್ಮ ನನ್ನ ತಾಯಿ. ವಾದಿ ಮತ್ತು ಪ್ರತಿವಾದಿಗಳು ಕಳೆದ 40 ವರ್ಷಗಳಿಂದ ಬೇರೆ ಬೇರೆ ಇದ್ದಾರೆ ಎಂದರೆ ಸರಿ. ವಾದಿಗಳ ವಿವಾಹದ ಕಾಲಕ್ಕೆ ಅವರ ಸಂಪೂರ್ಣ ಪಾಲನ್ನು ಕೊಡಲಾಗಿತ್ತು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಾಯಿಯ ಜೀವಿತ ಕಾಲದಲ್ಲಿ ವಾದಿಗಳಿಗೆ ಭಾಗಾಂಶ ನೀಡಲಾಗಿತ್ತು ಎಂದರೆ ಸರಿಯಲ್ಲ. ಈಗ ಭೂವಿಯ ಮೌಲ್ಯ ಹೆಚ್ಚಾಗಿರುವ ಕಾರಣ ಈ ದಾವೆಯನ್ನು ಹೂಡಲಾಗಿದೆ ಎಂದರೆ ಸರಿಯಲ್ಲ. ವಾದಿಗಳು ಈ ಹಿಂದೆ ಸಲ್ಲಿಸಿದ್ದ ದಾವೆ ಸಂಖ್ಯೆ 65/2019 ವಜಾವಾಗಿತ್ತು ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಪಾಲನ್ನು ಈಗಾಗಲೇ ಅವರಿಗೆ ನೀಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ